**SE – 008**

**ಮೊದಲನೇ ಸೆಮಿಸ್ಟರ್ ಬಿ.ಸಿ.ಎ. ಪರೀಕ್ಷೆ, ಜನವರಿ 2025**

**(SEP 2024 – 25)**

**ಕನ್ನಡ ಭಾಷಾ ಪತ್ರಿಕೆ - 1**

**ಗಣಕ ಕನ್ನಡ - I**

VISHWA CHETHANA DEGREE COLLEGE

Time : 3 Hours Max. Marks : 80

I. **ಐದು** ಪ್ರಶ್ನೆಗಳಿಗೆ ಉತ್ತರ ಬರೆಯಿರಿ (**100** ಪದಗಳನ್ನು ಮೀರದಂತೆ) : **(5×5=25)**

1) ಕರ್ನಾಟಕ ಒಂದೇ ಎಂದು ಹೇಳಿದ ಕಾರಣವೇನು ?

2) ಮುಕುಂದಣ್ಣ ಯಾರೊಂದಿಗೆ ಸಲುಗೆಯಿಂದ ಇರುತ್ತಿದ್ದ ಹಾಗೂ ಏಕೆ ?

3) ಕವಿ ಹೇಳಿರುವ ಮುಗಿಲಿನ ಪರಿ ಎಂಥದ್ದು ? ವಿವರಿಸಿ.

4) ಸುಲೇಮಾನೊಂದಿಗಿನ ಮುಬೀನಾಳ ಮದುವೆ ಮುರಿದು ಬೀಳಲು ಕಾರಣಗಳೇನು ?

5) ಪಾಸ್ಕಲ್ ಮಾಡಿದ ಆವಿಷ್ಕಾರವೇನು ? ಆತನ ಆಸಕ್ತಿ ವಿಷಯಗಳಾವುವು ?

6) ಮುಸ್ತಫನ ವ್ಯಕ್ತಿತ್ವವನ್ನು ಪರಿಚಯಿಸಿ.

7) ಇ–ಪುಸ್ತಕ ಎಂದರೇನು ? ವಿವರಿಸಿ.

II. **ಮೂರು** ಪ್ರಶ್ನೆಗಳಿಗೆ ಉತ್ತರ ಬರೆಯಿರಿ (**200** ಪದಗಳು ಮೀರದಂತೆ) : **(3×10=30)**

1) ಇಂಗ್ಲೀಷ್ ಭಾಷಾ ಮಾಧ್ಯಮ ಮತ್ತು ಇಂಗ್ಲೀಷ್ ಕಲಿಕೆಯು ಬಂಡವಾಳಗಾರ ಕೊಂಡು ಮಾರುವ ಉದ್ಯಮವೇ ? ಚರ್ಚಿಸಿ.

2) ರಾಧೆಗಾಗಿ ಪರಿತಪಿಸುವ ಚಿತ್ರಣವನ್ನು ನಾಟಕದಲ್ಲಿ ಹೇಗೆ ಚಿತ್ರಿಸಲಾಗಿದೆ ? ವಿವರಿಸಿ.

3) ಹೊಸ ತಂತ್ರಜ್ಞಾನಗಳು ಹೊಸ ಅವಕಾಶಗಳ ಮಹಾಪೂರವನ್ನೇ ಹೇಗೆ ಹರಿಸುತ್ತಿದೆ ? ವಿವರಿಸಿ.

4) ಮಾರುಕಟ್ಟೆಯಲ್ಲಿ ಲಭ್ಯವಿರುವ ಕನ್ನಡ ತಂತ್ರಾಂಶಗಳು ಯಾವುವು ?

III. ಕೆಳಗಿನ ಗದ್ಯಭಾಗವನ್ನು **ಮೂರನೇ ಒಂದು** ಭಾಗಕ್ಕೆ ಸಂಕ್ಷೇಪಿಸಿ, ಸೂಕ್ತ ಶೀರ್ಷಿಕೆ ನೀಡಿ : **(1×5=5)**

ಈ ಆಧುನಿಕ ಶಿಕ್ಷಣ ವ್ಯವಸ್ಥೆಯನ್ನು ಬ್ರಿಟಿಷರು ಪರಿಚಯಿಸಲಾಗಿ ಆಳುವ ವರ್ಗಕ್ಕೆ ಅಗತ್ಯವಾದ ರೀತಿಯ ಶಾಲಾ ಪದ್ಧತಿ ಭಾರತವನ್ನು ಪ್ರವೇಶ ಮಾಡಿತು. ಅಂದು ಭಾರತದಲ್ಲಿ ಬ್ರಿಟಿಷರಿಗೆ ಬೇಕಾಗಿದ್ದು ಕಾರ್ಮಿಕರು ಅಲ್ಲ. ಭಾರತ ಕೈಗಾರಿಕೆಯಲ್ಲಿ ಮುಂದೆ ಬರಲು ಸಾಧ್ಯವಾಗಲೇ ಇಲ್ಲ. ಆನಂತರವೂ ಭಾರತ ಕೈಗಾರಿಕಾ ಕ್ರಾಂತಿಯನ್ನು ಕಾಣಲೇ ಇಲ್ಲ. ಹೀಗಾಗಿ ಶಿಕ್ಷಣದ ಉದ್ದೇಶ ಈಸ್ಟ್–ಇಂಡಿಯಾ ಕಂಪನಿಯಲ್ಲಿ ದುಡಿಯುವ ಕಾರಕೂನರನ್ನು ತಯಾರು ಮಾಡುವುದಿತ್ತು. ಹಾಗಾಗಿ ಅದಕ್ಕೆ ತಕ್ಕ ವಿಷಯಗಳನ್ನು, ಭಾಷೆಯನ್ನು ರೂಪಿಸಲಾಯಿತು. ಭಾರತದಲ್ಲಿ ಶಿಕ್ಷಣ ಮಾಧ್ಯಮವನ್ನು ಕುರಿತ ಚರ್ಚೆ 19ನೇ ಶತಮಾನದಲ್ಲಿ ತೀವ್ರವಾಗಿತ್ತು . ಆ ಸಮಯದಲ್ಲಿ ಕಂಡುಕೊಂಡ ಮೆಕಾಲೆ ಸೂತ್ರದಲ್ಲಿ, ಪ್ರಾಥಮಿಕ ಶಿಕ್ಷಣವನ್ನು ಸ್ಥಳೀಯ

ಭಾಷೆಯಲ್ಲಿ ಉನ್ನತ ಶಿಕ್ಷಣವನ್ನು ಇಂಗ್ಲೀಷ್‌ನಲ್ಲಿ ಕೊಡಲು ತೀರ್ಮಾನಿಸಲಾಯಿತು. ವಾಸ್ತವವಾಗಿ ಸ್ಥಳೀಯ ಭಾಷೆಗಳನ್ನು ಕಲಿತು ಕಿಟೆಲ್ ಅಂತಹವರು ಕನ್ನಡಕ್ಕೆ ನಿಘಂಟನ್ನು ಬರೆದು ಆ ಮೂಲಕ ದೇಶಿ ಭಾಷೆಯನ್ನು ಶ್ರೀಮಂತಗೊಳಿಸಲು ಪ್ರಯತ್ನಿಸಿದರು. ಆದ್ದರಿಂದ ಇಂಗ್ಲೀಷ್ ಭಾಷೆಯನ್ನು ವಸಾಹತು ವಾಣಿಜ್ಯ ಭಾಷೆಯಾಗಿಸಿಕೊಂಡು ನಮ್ಮ ಭಾಷೆಗಳನ್ನೇ ಬಲಿ ಕೊಡಲು ಹೊರಟಿದ್ದೇವೆ.

IV. ಸಂಕ್ಷೇಪಿಸಿದ ಬರಹ ಆಧರಿಸಿ ಎರಡು ಪ್ರಶ್ನೆಗಳನ್ನು ರೂಪಿಸಿ. **(1×2=2)**

V. ಕೆಳಗಿನವುಗಳಲ್ಲಿ **ಎರಡು** ಪದಗಳನ್ನು ಬಳಸಿ ಸ್ವಂತ ವಾಕ್ಯ ರಚಿಸಿ : **(2×2=4)**

1) ತಲೆಬಾಗು 2) ಕೈಹಿಡಿ 3) ದಿಟ್ಟತನ 4) ಪಾದರಸ

VI. ನಿಮ್ಮ ಕಾಲೇಜಿನಲ್ಲಿ ಆಚರಿಸಿದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮದ ವರದಿಯನ್ನು ಪ್ರಕಟಿಸುವಂತೆ ಕೋರಿ ಪತ್ರಿಕಾ ಸಂಪಾದಕರಿಗೆ ಒಂದು ಪತ್ರ ಬರೆಯಿರಿ. **(1×5=5)**

VII. ಕೆಳಗಿನ ಪದಗಳಲ್ಲಿ **ನಾಲ್ಕು** ಪದಗಳಿಗೆ ಅರ್ಥ ಬರೆಯಿರಿ : **(4×1=4)**

1) ಕಾರಕೂನ 2) ವಿಷಾದ 3) ಉಡಿ

4) ಪ್ರಕ್ಷುಬ್ಧ 5) ಚಹರೆ 6) ಪಾತಕ

VIII. ಇವುಗಳಿಗೆ **ಒಂದೊಂದು** ಸರಿ ಉತ್ತರವನ್ನು ಗುರುತಿಸಿ ಬರೆಯಿರಿ (**ಎಲ್ಲಾ ಐದು** ಪ್ರಶ್ನೆಗಳಿಗೆ ಉತ್ತರಿಸಿ) : **(5×1=5)**

1) 'ಅನುಭವಾಮೃತ' ಕೃತಿಯನ್ನು ಬರೆದವರು

ಅ) ಸಹಜಾನಂದ ಆ) ಮಹಾಲಿಂಗರಂಗ

ಇ) ಶುಕಮುನಿ ಈ) ವೇದವ್ಯಾಸ

2) ಕನ್ನಡದಲ್ಲಿ 14 ಸಾಲಿನ ಪದ್ಯ ಜಾತಿಗೆ ಏನೆಂದು ಕರೆಯುತ್ತಾರೆ ?

ಅ) ಮೇಘದೂತ ಆ) ಚೌಪದಿ

ಇ) ವಚನಗಳು ಈ) ಅಷ್ಟಷಟ್ಪದಿ

3) 'ಸಾರ್ವತ್ರಿಕ ಸಾಪೇಕ್ಷತಾ ಸಿದ್ಧಾಂತ' ಮಂಡಿಸಿದವನು

ಅ) ಐನ್‌ಸ್ಟೈನ್ ಆ) ಗೆಲಿಲಿಯೊ

ಇ) ಪಾಸ್ಕಲ್ ಈ) ಟಾರಿಸಿಲಿ

4) ಶಾಂತಿ ತನಗೆ ಇಂಗ್ಲೀಷ್‌ನಲ್ಲಿ ಲೆಟರ್ ರೈಟಿಂಗ್ ಕಲಿಸಿದವರು ಯಾರೆಂದು ಹೇಳುತ್ತಾಳೆ ?

ಅ) ಪಾಟೀಲ್ ಸರ್ ಆ) ಶಂಕರ್ ಸರ್

ಇ) ವಿಕ್ರಮ್ ಸರ್ ಈ) ಗೋಪಿ ಸರ್

5) ಕಂಪ್ಯೂಟರ್‌ಗೆ ಅರ್ಥವಾಗುವ ಭಾಷೆ

ಅ) ಇಂಗ್ಲೀಷ್ ಆ) ಹೈಲೆವಲ್ ಲಾಂಗ್ವೇಜ್

ಇ) ಕನ್ನಡ ಈ) ವಿದ್ಯುತ್ ಸಂಕೇತಗಳ ಭಾಷೆ